


ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ರಾಜ್ಯದಾದ್ಯಂತ ಸಂಚರಿಸುತ್ತಿರುವ ‘ಕನ್ನಡ ರಥ’ ಕನ್ನಡಿಗರ ಸಮಗ್ರತೆಯ ಸಂಕೇತದಂತೆ ಕಾಣಿಸುತ್ತಿದೆ.




ತುಸು ಸೂಕ್ಷ್ಮವಾಗಿ ಹೀಗೆ ಗಮನಿಸಬಹುದು. ಕರ್ನಾಟಕದಲ್ಲಿ ಕನ್ನಡದ ಮಹಾನ್ ಧಾರೆಗೆ ಇತರ ಪ್ರಾದೇಶಿಕ ಸಮುದಾಯಗಳು ತಮ್ಮ ಭಾಷೆ ಮತ್ತು ಆಚರಣೆಗಳ ಮೂಲಕ ಹೇಗೆ ಕೊಡುಗೆಯನ್ನು ಕೊಟ್ಟಿವೆಯೋ, (ಅಂದರೆ ಹೇಗೆ ಕನ್ನಡವನ್ನು ತುಳು, ಕೊಂಕಣಿ, ಕೊಡವ, ಬ್ಯಾರಿ, ಅರೆಭಾಷೆಯ ಸಾಂಸ್ಕೃತಿಕತೆಯು ಸಿರಿವಂತಗೊಳಿಸಿವೆಯೋ) ಅದೇ ಈ ಪ್ರಾದೇಶಿಕ ಭಾಷೆಗಳೊಳಗೆಯೂ ಅಂತಹುದೇ ಕೊಡು ಕೊಳ್ಳುವಿಕೆಗಳು ನಡೆದಿವೆ. ಅದರಲ್ಲಿಯೂ ತುಳು ಮತ್ತು ಕೊಂಕಣಿ ಭಾಷೆಯ ಬೆಳವಣಿಗೆಗೆ, ಅತೀ ಸಣ್ಣ ಭಾಷೆಗಳನ್ನಾಡುವ ಸಮುದಾಯಗಳ ಬೃಹತ್ ಗಡಣವೇ ಬೆಂಬಲವನ್ನು ಕೊಟ್ಟಿದೆ ಎನ್ನಬಹುದು.

### ಕನ್ನಡದ ‘ಕೊಂಕಣಿ’ ಕಂಕಣ

ಕನ್ನಡದ ಚೆಲುವು–ಸಮೃದ್ಧಿಗೆ ಮಹತ್ವದ ಕೊಡುಗೆ ನೀಡಿದ ಭಾಷೆಗಳಲ್ಲಿ ಕೊಂಕಣಿಯೂ ಒಂದು. ಕೊಂಕಣಿ ಭಾಷಿಕ ಸಮುದಾಯದಲ್ಲಿ 41ಕ್ಕೂ ಹೆಚ್ಚು ರೀತಿಯ ಉಪಸಮುದಾಯಗಳು ಸೇರಿವೆ. ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ ಸಮುದಾಯದ ಜನರು ಕೊಂಕಣಿ ಭಾಷಿಕರಾಗಿ ಗುರುತಿಸಿಕೊಂಡಾಗ ಒಂದೇ ಛತ್ರದಡಿ ಬರುತ್ತಾರೆ.

ಹಿರಿಯ ಲೇಖಕಿ ಡಾ. ಗೀತಾ ಶೆಣೈ ಗುರುತಿಸುವಂತೆ, ‘ಮಂಜೇಶ್ವರ ಗೋವಿಂದ ಪೈ ಅವರಿಂದ ಹಿಡಿದು ಗೋಪಾಲಕೃಷ್ಣ ಪೈ ಅವರವರೆಗೆ ಬಹುಸಂಖ್ಯೆಯ ಕೊಂಕಣಿ ಭಾಷಿಕರು ಕನ್ನಡ ಸಾಹಿತ್ಯ ಕೃಷಿಯನ್ನು ನಡೆಸುತ್ತ ಬಂದವರು. ಶತಮಾನಗಳಷ್ಟು ಸುದೀರ್ಘ ಕಾಲದಲ್ಲಿ ಅನೇಕರು ಕನ್ನಡ ಸಾಹಿತ್ಯದ ಕೆಲ ಪ್ರಕಾರಗಳ ಪ್ರವರ್ತಕರಾಗಿ, ಮತ್ತೆ ಕೆಲವರು ಒಂದೊಂದು ಪ್ರಕಾರದಲ್ಲಿಯೂ ವಿಶೇಷವಾಗಿ ತಮ್ಮ ಛಾಪು ಮೂಡಿಸಿದರು. ಪಂಜೆ ಮಂಗೇಶರಾಯರು ಮಕ್ಕಳ ಸಾಹಿತ್ಯದ ಕ್ಷೇತ್ರದಲ್ಲಿ ಇಂದಿಗೂ ಜನಪ್ರಿಯರಾಗಿದ್ದಾರೆ. ಹಾಸ್ಯಸಾಹಿತಿಯಾಗಿ ರಮಾನಂದ ಪಡುಕೋಣೆಯವರು, ವಿಚಾರ ಸಾಹಿತ್ಯದಲ್ಲಿ ಗೌರೀಶ್ ಕಾಯ್ಕಿಣಿ, ಚುಟುಕು ಬ್ರಹ್ಮನೆಂದೇ ಗುರುತಿಸಿಕೊಂಡ ದಿನಕರ ದೇಸಾಯಿ, ನಾಟಕ ಪ್ರಕಾರದಲ್ಲಿ ಗಿರೀಶ ಕಾರ್ನಾಡ... ಹೀಗೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಶಿಕ್ಷಣ, ವೈದ್ಯಕೀಯ ಕ್ಷೇತ್ರ, ಕರಾವಳಿಯ ಸಾರಿಗೆ ಕ್ಷೇತ್ರ, ಬ್ಯಾಂಕಿಂಗ್ ವ್ಯವಸ್ಥೆಯ ಏಳ್ಗೆಯಲ್ಲಿ ಅವರ ಪಾತ್ರವು ಗಣನೀಯವಾಗಿದೆ. ಕೊಂಕಣಿ ಭಾಷಿಕರಾದ ಗೌಡಸಾರಸ್ವತ ಸಮುದಾಯವು ಸಾಹಿತ್ಯ ಕ್ಷೇತ್ರದಲ್ಲಿ ಮುನ್ನೆಲೆಯಲ್ಲಿ ಗುರುತಿಸಿಕೊಂಡರೆ, ಕೆಥೊಲಿಕ್ ಕ್ರಿಶ್ಚಿಯನ್ ಕೊಂಕಣಿ ಸಮುದಾಯದವು, ಪ್ರಕಾಶನ, ಪತ್ರಿಕೆ, ಭಾಷಾ ಅಧ್ಯಯನ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದೆ.’

ಕರಾವಳಿ ಭಾಗದಲ್ಲಿ ಹೆಚ್ಚಾಗಿರುವ ಕೊಂಕಣಿ ಮಾತೃಭಾಷಿಕ ಜನರು ತುಳುವರಾಗಿಯೂ ಗುರುತಿಸಿಕೊಂಡಿರುವುದಿದೆ. ಇದರಿಂದಾಗಿ, ತುಳುವಿನ ಬೆಳವಣಿಗೆಯಲ್ಲಿಯೂ ಅವರ ಪಾತ್ರವಿದೆ. ಗೌಡಸಾರಸ್ವತ ಸಮುದಾಯದ ಜನರು ಕೊಂಕಣಿಯನ್ನು ಕನ್ನಡದ ಲಿಪಿ ಬಳಸಿ ಬರೆಯುತ್ತಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯು ದೇವನಾಗರಿ ಲಿಪಿಗೆ ಮನ್ನಣೆ ನೀಡಿದ್ದರಿಂದ, ದೇವನಾಗರಿ ಲಿಪಿಯಲ್ಲಿಯೂ ಬರೆಯುವ ವಾಡಿಕೆ ಇರಿಸಿಕೊಂಡಿದ್ದಾರೆ. ಆದರೆ ಕೆಥೊಲಿಕ್ ಕ್ರಿಶ್ಚಿಯನ್ ಸಮುದಾಯವು ಅಪ್ಪಟ ಕನ್ನಡ ಲಿಪಿಯಲ್ಲಿಯೇ ಶತಮಾನ ಕಾಲದಿಂದ ಕಾರ್ಯನಿರ್ವಹಿಸುತ್ತಿದೆ. ಚರ್ಚ್‌ಗಳಲ್ಲಿಯೂ ಕನ್ನಡದ ಹಾಡುಗಳು ಮೊಳಗುತ್ತಿವೆ, ಕನ್ನಡದಲ್ಲಿಯೇ ಪ್ರಾರ್ಥನೆಗಳು ಸಲ್ಲುತ್ತವೆ. ಇಂತಹ ಭಾಷಿಕರಲ್ಲಿ ಕನ್ನಡಿಗರನ್ನು ತಲುಪಬೇಕು ಎನ್ನುವ ಆಶಯವು ಸದಾ ಜಾಗೃತವಾಗಿರುತ್ತದೆ. ಇದು ಅವರಿಗೆ ತಮ್ಮ ಭಾಷೆಯ ಮೇಲಿರುವ ಅಭಿಮಾನದ ಸಂಕೇತವೂ ಹೌದು, ಕನ್ನಡನಾಡಿನ ಸಮಗ್ರತೆಯಲ್ಲಿ ಅವರಿಗೆ ಇರುವ ಗೌರವವೂ ಹೌದು. ಅದೇ ವೇಳೆಗೆ ಅವರಿಗೆ ಆಡಳಿತ ಭಾಷೆಯಾದ ಕನ್ನಡದಿಂದ ಪ್ರೋತ್ಸಾಹದ ನಿರೀಕ್ಷೆ ಇರುವುದನ್ನೂ ಅಲ್ಲಗಳೆಯುವಂತಿಲ್ಲ.